# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ: 27ನೇ ಮೇ, 2013

* * *

**ಸಂಖ್ಯೆ: 26**

ವಿಧಾನ ಪರಿಷತ್ತಿನ ಪ್ರತಿ ಅಧಿವೇಶನವನ್ನು 'ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭಿಸಿ ರಾಷ್ಟ್ರಗೀತೆ 'ಜನಗಣಮನ' ದೊಂದಿಗೆ ಅನಿರ್ದಿಷ್ಟಾವಧಿಗೆ ಮುಂದೂಡುವ ವ್ಯವಸ್ಥೆ 114ನೇ ಅಧಿವೇಶನದಿಂದ ಜಾರಿಗೆ ಬಂದಿರುವುದು ಮಾನ್ಯ ಸದಸ್ಯರುಗಳೆಲ್ಲರಿಗೂ ತಿಳಿದ ವಿಷಯವಾಗಿರುತ್ತದೆ.

ವಿಧಾನ ಪರಿಷತ್ತಿನ 122ನೇ ಅಧಿವೇಶನವು ದಿನಾಂಕ: 03.06.2013ರಂದು ರಾಜ್ಯಪಾಲರ ಭಾಷಣದ ನಂತರ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಸಭೆ ಸೇರಲಿದೆ.

ಸಭೆಯು 'ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭವಾಗಲಿದ್ದು, ಅನಿರ್ದಿಷ್ಟಾವಧಿಗೆ ಮುಂದೂಡುವ ದಿನ 'ರಾಷ್ಟ್ರಗೀತೆ ಜನಗಣಮನ' ದೊಂದಿಗೆ ಮುಂದೂಡಲ್ಪಡುತ್ತದೆ.

ಆದ್ದರಿಂದ, ಈ ಸಂದರ್ಭದಲ್ಲಿ ಮಾನ್ಯ ಸದಸ್ಯರೆಲ್ಲರೂ ಉಪಸ್ಥಿತರಿದ್ದು ಎದ್ದು ನಿಂತು ಗೌರವ ಸಲ್ಲಿಸಬೇಕೆಂದು ಮತ್ತೊಮ್ಮೆ ಈ ಮೂಲಕ ಕೋರಲಾಗಿದೆ.

**ವಿ. ಶ್ರೀಶ್**
**ಕಾರ್ಯದರ್ಶಿ**

**ಮಾನ್ಯ ಸಚಿವರುಗಳು ಹಾಗೂ**
**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**